

**ಕೋಟ** ವಿವೇಕ ಬಾಲಕಿಯರ ಪ್ರೌಢ ಶಾಲೆಯಲ್ಲಿ ಮಕ್ಕಳ ಸಂಚಿಕೆ ಅರಳುಮೊಗ್ಗು ಪತ್ರಿಕೆಯನ್ನು ಬ್ರಹ್ಮಾವರದ ಎಸ್.ಎಂ.ಎಸ್ ಆಂಗ್ಲ ಮಾಧ್ಯಮ ಶಾಲೆಯ ಉಪ ಪ್ರಾಂಶು ಪಾಲರಾದ ಅಭಿಲಾಷಾ ಸೋಮಯಾಜಿ ಬಿಡುಗಡೆ ಮಾಡಿದರು. ನೀಲಾವರ ಸುರೇಂದ್ರ ಅಡಿಗ, ಸುಪ್ರದಾ ರಾವ್ ಇದ್ದರು.

ಪ್ರಜಾವಾಣಿ ಕರಾವಳಿ

ದಕ್ಷಿಣ ಕನ್ನಡ || ಉಡುಪಿ || ಕಾಸರಗೋಡು





ಮಂಗಳೂರಿನ ಕದ್ರಿ ಉದ್ಯಾನವನದಲ್ಲಿ ತೋಟಗಾರಿಕಾ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ಆಶ್ರಯದಲ್ಲಿ ಶನಿವಾರ ಏರ್ಪಡಿಸಿದ್ದ ಫಲಪುಷ್ಪ ಪ್ರದರ್ಶನ ಸಂದರ್ಭದಲ್ಲಿ ಸಿಹಿಕುಂಬಳದಲ್ಲಿ ರಚಿಸಿದ ಪ್ರತಿಕೃ
ವಿಧಾನ ಸಭಾಧ್ಯಕ್ಷ ಎಸ್.ಯೋಗೀಶ್ ಭಟ್, ಸಂಸದ ನಳಿನ್ ಕುಮಾರ್ ಕಟೀಲು ಹಾಗೂ ಇನ್ನಿತರರು ಇದ್ದರು. ಪ್ರದರ್ಶನವನ್ನು ನೋಡಲು ಆಗಮಿಸಿದ್ದ ಜನಸಮೂಹ.

# ಬೆಳ್ತಂಗಡಿ: 150 ಮನೆಗಳಿಗೆ 'ಸೌರಜ್ಯೋತಿ'

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ: ಬೆಳ್ತಂಗಡಿ ರೋಟರಿ ಕ್ಲಬ್, ಸೆಲ್ಕೋ ಸಂಸ್ಥೆಯ ಸಹಯೋಗದೊಂದಿಗೆ ಸೌರಜ್ಯೋತಿ ಯೋಜನೆ ಅನ್ವಯ ತಾಲ್ಲೂಕಿನ ಆಯ್ದ 150 ಮನೆಗಳಿಗೆ ರೂ. 30 ಲಕ್ಷ ವೆಚ್ಚದಲ್ಲಿ 'ಸೌರ ವಿದ್ಯುತ್' ವ್ಯವಸ್ಥೆ ಒದಗಿಸಲಾಗಿದೆ ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷ ಕೆ.ಪ್ರತಾಪ್‌ಸಿಂಹ ನಾಯಕ್ ತಿಳಿಸಿದರು.

ಉಜಿರೆಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಕಳಂಜ, ನಿಡ್ಲೆ, ಮತ್ತು ಶಿಶಿಲ ಗ್ರಾಮಗಳನ್ನು 'ಸೌರ ಗ್ರಾಮ'ಗಳಾಗಿ ಪರಿವರ್ತಿಸಲಾಗಿದೆ ಎಂದರು.

ಈ ಯೋಜನೆಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್ ಆರ್ಥಿಕ ನೆರವು ನೀಡಿ ಸಹಕರಿಸಿವೆ ಎಂದರು.

ಸೌರ ವಿದ್ಯುತ್ ಪುನರ್ ನವೀಕರಿಸಬ



ಸೌರ ವಿದ್ಯುತ್ ಬೆಳಕಿನಿಂದ ಮನೆ - ಮನ ಬೆಳಗಿದ ಸಂಭ್ರಮ - ಸಡಗರದಲ್ಲಿ ಶಿಶಿಲದ ಫಲಾನುಭವಿಗಳು.

ಹುದಾದ ಆಶಾದಾಯಕ ಇಂಧನ ಮೂಲ ವಾಗಿದೆ. ಪರಿಸರ ಸಹ್ಯ, ಸುಸ್ಥಿರ ಬೆಳವಣಿಗೆಗೆ ಪೂರಕವಾದ ಸೌರ ವಿದ್ಯುತ್ ಅಭಿಯಾನ ಗ್ರಾಮೀಣ ಪ್ರದೇಶದ ಮನೆ - ಮನಗಳನ್ನು ಬೆಳಗಿಸಿದೆ. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನು ಕೂಲವಾಗಿದೆ ಎಂದು ಸೆಲ್ಕೋದ ಆಡಳಿತ ನಿರ್ದೇಶಕ ಹರೀಶ್ ಹಂದೆ ತಿಳಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಶಿಶಿಲ ಗ್ರಾಮ ಫಲಾನುಭವಿ ಹಾಗೂ ಕೂಲಿ ಕಾರ್ಮಿಕರಾದ ವಿಮಲ, 'ಸೌರ ವಿದ್ಯುತ್ ನಿಂದಾಗಿ ನಮ್ಮ ಮನೆಯ ಭಾಗ್ಯದ ಬಾಗಿಲು ತೆರೆದಿದೆ' ಎಂದರು. 'ಮನೆಯಲ್ಲಿ ಈಗ ಹೆಚ್ಚು ಹೊತ್ತು ಓದಲು ಅನುಕೂಲವಾಗಿದೆ ಎಂದು ಆರನೇ ತರಗತಿ ವಿದ್ಯಾರ್ಥಿನಿ ಸೌಜನ್ಯ ಸಂತಸ ವ್ಯಕ್ತಪಡಿಸಿದಳು. ಡೇನಿಯಲ್, ನಾರಾಯಣ ಭಿಡೆ, ಜಗದೀಶ್ ಪೈ ಮತ್ತು ಎಸ್‌ಡಿಎಂ ಪ್ರಾಂಶುಪಾಲ ಡಾ. ಬಿ.ಯಶೋವರ್ಮ ಇದ್ದರು.